# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಬೀದರ

## ಟೆಂಡರ ಅಧಿಸೂಚನೆ ಸಂಖ್ಯೆ: 104 /2025 ದಿನಾಂಕ: 03/03/2025

ಈ ಕೆಳಗೆ ಸಹಿ ಮಾಡಿರುವವರು ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯ ಪಡಿಸುವುದೇನೆಂದರೆ,

ಬೀದರ್ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿರುವ 50X70 = 3500 ಚದರ ಅಡಿ ವಿಸ್ತೀರ್ಣವುಳ್ಳ ಖಾಲಿ ಸ್ಥಳವನ್ನು ಹೋಟೆಲ್ (ಕ್ಯಾಂಟಿನ್) ನಡೆಸುವ ಉದ್ದೇಶಕ್ಕಾಗಿ ಈ ಕೆಳಗೆ ನಮೂದಿಸಿದ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟು 03 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಕೊಡುವ ಸಂಬಂಧ ಟೆಂಟರ್ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಆದ್ದರಿಂದ ಅನುಭವವುಳ್ಳ ಆಸಕ್ತರಿಂದ ಮೊಹರಾದ ಟೆಂಡರ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ನಿಗದಿತ ಟೆಂಡರ್ ನಮೂನೆ ಹಾಗೂ ಇತರೆ ವಿವರಗಳನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೀದರ ರವರ ಕಛೇರಿಯಲ್ಲಿ ಹಾಗೂ ಜಾಲತಾಣ ವಿಳಾಸ https://bidar.dcourts.gov.in/ ನಲ್ಲಿ ಲಭ್ಯವಿರುತ್ತದೆ. ನಿಗದಿತ ಟೆಂಡರ್ ನಮೂನೆಯನ್ನು (ಅನುಬಂಧ-1) ಭರ್ತಿಮಾಡಿ ದಿನಾಂಕ: 26/03/2025 ರ ಸಂಜೆ 5:00 ಗಂಟೆಯ ಒಳಗಾಗಿ ಮೊಹರಾದ ಲಕೋಟೆಯಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಬೀದರ ರವರ ಕಛೇರಿಗೆ ಸಲ್ಲಿಸತಕ್ಕದ್ದು.

### ಷರತ್ತು ಹಾಗೂ ನಿಬಂಧನೆಗಳು

1) ಸದರಿ ಸ್ಥಳದಲ್ಲಿ ಸಸ್ಯಹಾರಿ ಹೋಟೆಲ್ (ಕ್ಯಾಂಟಿನ್) ನಡೆಸುವ ಉದ್ದೇಶಕ್ಕಾಗಿ ಲೋಕೋಪಯೋಗಿ ಇಲಾಖೆಯು ನಿಗದಿಪಡಿಸಿರುವ ಪ್ರತಿ ತಿಂಗಳ ಕನಿಷ್ಟ ಬಾಡಿಗೆ ದರ ರೂ. 5000.00/- ( ಐದು ಸಾವಿರ ರೂಪಾಯಿ) ಮೇಲ್ಪಟ್ಟು, ಅತೀ ಹೆಚ್ಚು ಬಾಡಿಗೆ ಪ್ರಸ್ತಾವನೆ ಸಲ್ಲಿಸುವ ಟೆಂಡರ್ ದಾರರಿಗೆ ರೂ. 20,000/- ಗಳ ಠೇವಣಿ ಪಡೆದು ಗುತ್ತಿಗೆ ಆಧಾರದ ಮೇಲೆ ನೀಡಲಾಗುವುದು.

2) ಆಸಕ್ತ ಅರ್ಜಿದಾರರು ಟೆಂಡರ್ ದಸ್ತಾವೇಜಿನೊಂದಿಗೆ ರೂ. 20,000/- ಗಳ EMD ಮೊಬಲಗನ್ನು Prl. District & Sessions Judge, Bidar ಇವರ ಹೆಸರಿನಲ್ಲಿ ತೆಗೆದ ರಾಷ್ಟ್ರೀಕೃತ ಬ್ಯಾಂಕಿನ ಡಿಮ್ಯಾಂಡ್ ಡ್ರಾಫ್ಟ್ ರೂಪದಲ್ಲಿ ಸಲ್ಲಿಸತಕ್ಕದ್ದು, EMD ರಹಿತ ಟೆಂಡರ್

ಪ್ರಸ್ತಾವನೆಗಳನ್ನು ಟೆಂಡರ್ ಪ್ರಕ್ರಿಯೆಗಾಗಿ ಪರಿಗಣಿಸಲಾಗುವುದಿಲ್ಲ, EMD ಮೊಬಲಗನ್ನು ಟೆಂಡರ್ ಪ್ರಕ್ರಿಯೆ ಸಂಪೂರ್ಣವಾಗಿ ಮುಕ್ತಾಯವಾದ ಬಳಿಕ ಹಿಂದಿರುಗಿಸಲಾಗುವುದು.

3) ಯಶಸ್ವಿ ಬಿಡ್ಡುದಾರರು ಪರವಾನಿಗೆ ನೀಡಿಕೆಯ ಆದೇಶವಾದ 7 ದಿನಗಳ ಒಳಗಾಗಿ ಹೋಟೆಲ್ (ಕ್ಯಾಂಟಿನ್) ಕಾರ್ಯಾಚರಣೆಯನ್ನು ಪ್ರಾರಂಭಿಸತಕ್ಕದ್ದು, ತಪ್ಪಿದ್ದಲ್ಲಿ EMD ಮೊಬಲಗನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮಕೈಗೊಳ್ಳಲಾಗುವುದು ಹಾಗೂ 2ನೇ ಅತೀ ಹೆಚ್ಚಿನ ಬಿಡ್ಡುದಾರರಿಗೆ ಹೋಟೆಲ್ (ಕ್ಯಾಂಟಿನ್) ನಡೆಸಲು ಗುತ್ತಿಗೆ ನೀಡಲಾಗುವುದು.

4) ಸದರಿ ಹೋಟೆಲ್ (ಕ್ಯಾಂಟಿನ್) ನಡೆಸುವವರು ರೂ. 20,000/- ಭದ್ರತಾ ಠೇವಣಿಯನ್ನು ಲೋಕೋಪಯೋಗಿ ಇಲಾಖೆಯ ಹೆಸರಿನಲ್ಲಿ ತೆಗೆಯಿಸಿ ಇಡತಕ್ಕದ್ದು ಮತ್ತು ಸದರಿ ಹಣಕ್ಕೆ ಯಾವುದೇ ರೀತಿಯ ಬಡ್ಡಿ ನೀಡಲಾಗುವುದಿಲ್ಲ. ಗುತ್ತಿಗೆಯ ಅವಧಿ ಮುಗಿದ ನಂತರ ಸುಸ್ಥಿತಿಯಲ್ಲಿ ಹೋಟೆಲ್ (ಕ್ಯಾಂಟಿನ್) ಸ್ಥಳವನ್ನು ಖಾಲಿ ಮಾಡಿದ ನಂತರ ಯಾವುದೇ ಪಾವತಿ ಬಾಕಿ ಇದ್ದಲ್ಲಿ ಅದನ್ನು ಕಡಿತಗೊಳಿಸಿ, ಉಳಿದ ಮೊತ್ತವನ್ನು ಹಿಂದಿರುಗಿಸಲಾಗುವುದು.

5) ಸದರಿ ಹೋಟೆಲ್ (ಕ್ಯಾಂಟಿನ್) ನಡೆಸುವ ಕುರಿತಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೀದರ ಇವರ ಜೊತೆಯಲ್ಲಿ ನಿಬಂಧನೆಗಳಿಗನುಸಾರವಾಗಿ ಒಪ್ಪಂದ ಪತ್ರ ಮಾಡಿಕೊಳ್ಳತಕ್ಕದ್ದು, ಕಾಲಕಾಲಕ್ಕೆ ಬದಲಾದ ನಿಬಂಧನೆಗಳಿಗೆ ಗುತ್ತಿಗೆದಾರರು ಬದ್ಧರಾಗಿರತಕ್ಕದ್ದು.

6) ಅರ್ಜಿದಾರರು ಹೋಟೆಲ್ ಉದ್ಯಮ ನಡೆಸಲು ಸಂಬಂಧಪಟ್ಟ ಪ್ರಾಧಿಕಾರದವರಿಂದ ಪಡೆದ ಪ್ರಮಾಣ ಪತ್ರ (ಟ್ರೇಡ್ ಲೈಸೆನ್ಸ್) ಹಾಗೂ ಸಂಬಂಧಿತ ತೆರಿಗೆ ಇಲಾಖೆಯ ನೋಂದಣಿ ಪತ್ರವನ್ನು ಹೊಂದಿರತಕ್ಕದ್ದು ಹಾಗೂ ಟೆಂಡರ್ ದಸ್ತಾವೇಜಿನೊಂದಿಗೆ ಸಲ್ಲಿಸತಕ್ಕದ್ದು ಮತ್ತು ಉದ್ಯಮ ಸ್ಥಳದಲ್ಲಿ ಕಾಣುವಂತೆ ಪ್ರದರ್ಶಿಸತಕ್ಕದ್ದು.

7) ಹೋಟೆಲ್ (ಕ್ಯಾಂಟಿನ್) ನಡೆಸುವ ಗುತ್ತಿಗೆದಾರರು ಪ್ರತಿ ತಿಂಗಳ ಬಾಡಿಗೆಯನ್ನು ತಪ್ಪದೇ ನಿಗದಿತ ದಿನಾಂಕದೊಳಗಾಗಿ ಚಲನ್ ಮುಖಾಂತರ ಲೋಕೋಪಯೋಗಿ ಇಲಾಖೆ ಬೀದರಗೆ ಪಾವತಿಸಿ ಅದರ ಪ್ರತಿಯನ್ನು ಈ ಕಚೇರಿಯಲ್ಲಿ ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಗುತ್ತಿಗೆಯನ್ನು ರದ್ದುಪಡಿಸಲಾಗುವುದು ಹಾಗೂ ಅವಶ್ಯವಿದ್ದಲ್ಲಿ ಪ್ರತಿ ವರ್ಷ ಸದರಿ ಬಾಡಿಗೆಯ ಶೇಕಡ 10 ರಷ್ಟು ಹೆಚ್ಚಿಸಲಾಗುವುದು.

8) ಗುತ್ತಿಗೆ ಪಡೆಯುವ ಅರ್ಜಿದಾರರು ಇತ್ತೀಚಿನ ಎರಡು ಭಾವಚಿತ್ರಗಳನ್ನು ಗುರುತು ಪತ್ರ ಮತ್ತು ವಿಳಾಸದ ದಾಖಲೆಯನ್ನು ಹಾಜರುಪಡಿಸತಕ್ಕದ್ದು, ಅದೇ ರೀತಿ ಹೋಟೆಲ್ (ಕ್ಯಾಂಟಿನ್) ನಲ್ಲಿ

ಕೆಲಸ ಮಾಡುವ ಕೆಲಸಗಾರರ ಗುರುತು ಪತ್ರ ಹಾಗೂ ವಿಳಾಸದ ದಾಖಲೆಯನ್ನು ಕೂಡ ಹಾಜರುಪಡಿಸತಕ್ಕದ್ದು.

9) ಹೋಟೆಲ್ (ಕ್ಯಾಂಟಿನ್) ನಲ್ಲಿ ತಯಾರಿಸುವ ಆಹಾರ ಪದಾರ್ಥಗಳ ಪಟ್ಟಿ ಹಾಗೂ ಅವುಗಳ ಪದಾರ್ಥವಾರು ಪ್ರಮಾಣ ಹಾಗೂ ದರಗಳ ಪಟ್ಟಿಯನ್ನು ಟೆಂಡರ್ ದಸ್ತಾವೇಜಿನೊಂದಿಗೆ ಅನುಬಂಧ-2 ರಲ್ಲಿ ಸಲ್ಲಿಸತಕ್ಕದ್ದು, ಯಶಸ್ವಿ ಬಿಡ್ಡುದಾರರು ಟೆಂಡರ್ ದಸ್ತಾವೇಜಿನೊಂದಿಗೆ ಸಲ್ಲಿಸಿದ / ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೀದರ ಇವರಿಂದ ಅನುಮೋದಿಸಲ್ಪಟ್ಟ ದರಪಟ್ಟಿಯನ್ನು ಹೋಟೆಲಿನಲ್ಲಿ ಕಾಣುವಂತೆ ಪ್ರದರ್ಶಿಸಿ ಅದರ ಪ್ರಕಾರವೇ ಆಹಾರ ಪದಾರ್ಥಗಳನ್ನು ಗ್ರಾಹಕರಿಗೆ ಸರಬರಾಜು ಮಾಡತಕ್ಕದ್ದು ಹಾಗೂ ಆಹಾರ ಪದಾರ್ಥಗಳ ದರಗಳನ್ನು ಪರಿಷ್ಕರಿಸುವ ಮುಂಚೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೀದರ ಇವರ ಲಿಖಿತ ಪರವಾನಗಿ ಪಡೆಯತಕ್ಕದ್ದು.

10) ಸದರಿ ಹೋಟಲ್ (ಕ್ಯಾಂಟಿನ್)ನಲ್ಲಿ ತಯಾರಿಸುವ ಅಥವಾ ಮಾರಾಟ ಮಾಡುವ ಎಲ್ಲಾ ಆಹಾರ ಪದಾರ್ಥಗಳು ಸ್ವಚ್ಛ ಮತ್ತು ಆರೋಗ್ಯಪೂರ್ಣವಾಗಿರತಕ್ಕದ್ದು ಹಾಗೂ ಆಹಾರ ಪದಾರ್ಥಗಳ ತಯಾರಿಕೆಗಾಗಿ ಉತ್ತಮ ಗುಣಮಟ್ಟದ ತರಕಾರಿ, ಧಾನ್ಯಗಳ ಹಾಗೂ ಖಾದ್ಯ ತೈಲವನ್ನು ಮಾತ್ರ ಉಪಯೋಗಿಸತಕ್ಕದ್ದು, ಗ್ರಾಹಕರಿಗೆ ಕುಡಿಯಲು ಶುದ್ದೀಕರಿಸಿದ ನೀರನ್ನು ಒದಗಿಸುವುದು ಅಲ್ಲದೆ ಸಸ್ಯಾಹಾರಿ ಆಹಾರ ಪದಾರ್ಥಗಳನ್ನು ಮಾತ್ರ ತಯಾರಿಸತಕ್ಕದ್ದು ಅಥವಾ ಮಾರಾಟ ಮಾಡತಕ್ಕದ್ದು ತಪ್ಪಿದ್ದಲ್ಲಿ ಗುತ್ತಿಗೆಯನ್ನು ರದ್ದುಪಡಿಸಲಾಗುವುದು ಮತ್ತು ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಲು ಶಿಫಾರಸ್ಸು ಮಾಡಲಾಗುವುದು.

11) ಗುತ್ತಿಗೆ/ಲೈಸೆನ್ಸ್ ನೀಡಿಕೆ ಪ್ರಾಧಿಕಾರವು ಸದರಿ ಹೋಟೆಲ್ (ಕ್ಯಾಂಟಿನ್) ನಲ್ಲಿ ತಯಾರಿಸುವ ಅಥವಾ ಮಾರಾಟ ಮಾಡುವ ಎಲ್ಲಾ ಆಹಾರ ಪದಾರ್ಥಗಳ ಗುಣಮಟ್ಟ ಹಾಗೂ ಪ್ರಮಾಣವನ್ನು ಯಾವಾಗ ಬೇಕಾದರೂ ಪರೀಕ್ಷಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಸದರಿ ಹೋಟೆಲ್ (ಕ್ಯಾಂಟಿನ್)ನಲ್ಲಿ ತಯಾರಿಸಲಾದ ಆಹಾರ ಪದಾರ್ಥಗಳನ್ನು ಸದರಿ ಹೋಟೆಲ್ (ಕ್ಯಾಂಟಿನ್) ಆವರಣದಲ್ಲಿ ಮಾತ್ರ ಮಾರಾಟ ಮಾಡತಕ್ಕದ್ದು.

12) ವಿದ್ಯುತ್ ಬಿಲ್ಲು, ನೀರಿನ ಕರ ಹಾಗೂ ಸ್ವಚ್ಛತೆಗೆ ಸಂಬಂಧಿಸಿದಂತೆ ತಗಲುವ ಖರ್ಚನ್ನು ಮತ್ತು ಇನ್ನಿತರೆ ಯಾವುದೇ ಖರ್ಚನ್ನು ಗುತ್ತಿಗೆದಾರರೇ ಭರಿಸತಕ್ಕದ್ದು, ಗುತ್ತಿಗೆದಾರರು, ಬೀದರ ನಗರಸಭೆ ವತಿಯಿಂದ ಜಾರಿಮಾಡಿರುವ ಕಸ/ತ್ಯಾಜ್ಯ ವಿಲೇವಾರಿ ಪದ್ಧತಿಯನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳತಕ್ಕದ್ದು.

13) ಗುತ್ತಿಗೆದಾರರು ಸದರಿ ಹೋಟೆಲ್ (ಕ್ಯಾಂಟಿನ್) ಉದ್ಯಮವನ್ನು ಬೆಳಿಗ್ಗೆ 7:00 ಗಂಟೆಯಿಂದ ಸಾಯಂಕಾಲ 06:30 ಗಂಟೆಯವರೆಗೆ ಮಾತ್ರ ನಡೆಸತಕ್ಕದ್ದು.

14) ಸದರಿ ಹೋಟೆಲ್ (ಕ್ಯಾಂಟೀನ್) ನಡೆಯುವ ಸ್ಥಳದ ಅವಶ್ಯಕತೆ ನ್ಯಾಯಾಲಯಕ್ಕೆ ಕಂಡುಬಂದಲ್ಲಿ ಗುತ್ತಿಗೆದಾರರು ಹೋಟೆಲ್ (ಕ್ಯಾಂಟಿನ್) ಸ್ಥಳವನ್ನು ನೋಟಿಸ್ ಪಡೆದ 15 ದಿನಗಳೊಳಗಾಗಿ ತೆರವು ಮಾಡಬೇಕು. ಗುತ್ತಿಗೆದಾರರಿಗೆ ಈ ಬಗ್ಗೆ ಯಾವುದೇ ರೀತಿಯ ಪರಿಹಾರ ನೀಡಲಾಗುವುದಿಲ್ಲ.

15) ಸದರಿ ಹೋಟೆಲ್ (ಕ್ಯಾಂಟಿನ್)ನಲ್ಲಿ ಆರೋಗ್ಯಕ್ಕೆ ಹಾನಿಕರವಾದ ವಸ್ತುಗಳಾದ ಗುಟ್ಕಾ, ಸಿಗರೇಟ್, ಮಾದಕದ್ರವ್ಯ, ಮಾದಕ ಪಾನೀಯ ಹಾಗೂ ಇತರೆ ಯಾವುದೇ ಅನಪೇಕ್ಷಿತ ವಸ್ತುಗಳನ್ನು ಸಂಗ್ರಹಿಸಿ ಇಡತಕ್ಕದ್ದಲ್ಲ ಮತ್ತು ಮಾರಾಟ ಮಾಡತಕ್ಕದ್ದಲ್ಲ, ಸದರಿ ಹೋಟೆಲನಲ್ಲಿ (ಕ್ಯಾಂಟಿನ್) ಉಪಯೋಗಕ್ಕೆ ಹೊರತುಪಡಿಸಿ ಬೇರೆ ಯಾವುದೇ ವ್ಯವಹಾರಗಳಿಗೆ ಮತ್ತು ಕಾನೂನು ಬಾಹಿರ ಚಟುವಟಿಕೆಗಳಿಗೆ ಬಳಸಿಕೊಳ್ಳತಕ್ಕದ್ದಲ್ಲ. ಒಂದು ವೇಳೆ ಬೇರೆ ಯಾವುದೇ ಉದ್ಯೋಗಕ್ಕೆ/ಉದ್ದೇಶಕ್ಕೆ ಬಳಸಿಕೊಂಡಿದ್ದು ಕಂಡುಬಂದಲ್ಲಿ ಸದರಿ ಗುತ್ತಿಗೆಯನ್ನು ರದ್ದುಪಡಿಸಲಾಗುವುದು.

16) ಸದರಿ ಹೋಟೆಲ್ (ಕ್ಯಾಂಟಿನ್) ನಡೆಸುವುದರಿಂದ ನ್ಯಾಯಾಲಯದ ಯಾವುದೇ ಕಾರ್ಯಕಲಾಪಗಳಿಗೆ, ಕಕ್ಷಿದಾರರಿಗೆ, ನ್ಯಾಯವಾದಿಗಳಿಗೆ, ನ್ಯಾಯಾಲಯದ ಸಿಬ್ಬಂದಿಯವರಿಗೆ ಹಾಗೂ ವಾಹನಗಳ ಚಲನವಲನಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳತಕ್ಕದ್ದು.

17) ಸದರಿ ಹೋಟೆಲ್ (ಕ್ಯಾಂಟಿನ್) ಸ್ಥಳ ಮತ್ತು ಪರಿಸರವನ್ನು ಯಾವಾಗಲೂ ಸ್ವಚ್ಛವಾಗಿ ಇಡತಕ್ಕದ್ದು. ಅಲ್ಲದೇ ಅಲ್ಲಿ ಉಪಯೋಗಿಸುವ ಪಾತ್ರೆ ಮತ್ತು ಇತರ ಅಡುಗೆ ಪರಿಕರಗಳನ್ನು ಸ್ವಚ್ಛ ಹಾಗೂ ಆರೋಗ್ಯ ಪೂರ್ಣವಾಗಿರುವಂತೆ ನೋಡಿಕೊಳ್ಳತಕ್ಕದ್ದು.

18) ಹೋಟೆಲ್ (ಕ್ಯಾಂಟಿನ್) ನಡೆಸಲು ಪರವಾನಿಗೆ ನೀಡಿದ ನಂತರ ಕಟ್ಟಡದಲ್ಲಿ ಅಳವಡಿಸಿಕೊಳ್ಳುವ ವಿದ್ಯುತ್ ಉಪಕರಣಗಳು ಪೀಠೋಪಕರಣಗಳು ಹಾಗೂ ಇತರೆ ಅಳವಡಿಕೆಗಳಿಗೆ ಹಾನಿ ಸಂಭವಿಸಿದ್ದಲ್ಲಿ ಗುತ್ತಿಗೆದಾರರೇ ಜವಾಬ್ದಾರಿಯಾಗಿರುತ್ತಾರೆ.

19) ಹೋಟೆಲ್ (ಕ್ಯಾಂಟಿನ್) ಸ್ಥಳವನ್ನು ಅಧಿಕೃತ ಗುತ್ತಿಗೆದಾರರು ಬೇರೆ ಯಾರಿಗೂ ಬಾಡಿಗೆ/ಗುತ್ತಿಗೆ ಅಥವಾ ಇನ್ಯಾವುದೇ ರೂಪದಲ್ಲಿ ಪರಭಾರೆ ಮಾಡತಕ್ಕದ್ದಲ್ಲ. ಗುತ್ತಿಗೆದಾರರು ಹೋಟೆಲ್ (ಕ್ಯಾಂಟಿನ್) ನಡೆಸಲು ಯಾವುದೇ ಕಾರಣಕ್ಕೂ ಬಾಲಕಾರ್ಮಿಕರನ್ನು ನೇಮಿಸಿಕೊಳ್ಳುವಂತಿಲ್ಲ.

20) ಗುತ್ತಿಗೆದಾರರು ತಮ್ಮ ಪರವಾನಿಗೆ ಪತ್ರ (ಲೈಸೆನ್ಸ್)ವನ್ನು ಕೇಳಿದಾಗ ತೋರಿಸತಕ್ಕದ್ದು, ಲೈಸೆನ್ಸ್ ಪಡೆದ ಗುತ್ತಿಗೆದಾರರು ಮಾತ್ರ ಈ ಉದ್ಯಮವನ್ನು ನಡೆಸಲು ಅರ್ಹರಾಗಿರುತ್ತಾರೆ.

21) ಸದರಿ ಹೋಟೆಲ್ (ಕ್ಯಾಂಟಿನ್)ನ ಗುತ್ತಿಗೆ ಅವಧಿಯು ಮೂರು ವರ್ಷಗಳದ್ದಾಗಿದ್ದು, ಒಂದು ವೇಳೆ ಷರತ್ತುಗಳ ಉಲ್ಲಂಘನೆ, ನ್ಯಾಯಾಧೀಶರುಗಳಿಂದ, ವಕೀಲರು ಹಾಗು ಕಕ್ಷಿದಾರರಿಂದ, ಮತ್ತು ಸಿಬ್ಬಂಧಿಗಳಿಂದ ದೂರುಗಳು ಬಂದರೆ ಅವುಗಳನ್ನು ಪರಿಶೀಲಿಸಿ, ಗುತ್ತಿಗೆಯನ್ನು ರದ್ದುಪಡಿಸಲು ಕ್ರಮಕೈಗೊಳ್ಳಲಾಗುವುದು ಸದರಿ ಗುತ್ತಿಗೆ ಅವಧಿ ಮುಗಿದ ಮೇಲೆ ಅಥವಾ ಮಧ್ಯದಲ್ಲಿಯೇ ರದ್ದಾದರೆ 15 ದಿನಗಳ ಒಳಗಾಗಿ ಸದರಿ ಹೋಟೆಲ್ (ಕ್ಯಾಂಟಿನ್) ಸ್ಥಳವನ್ನು ಖಾಲಿ ಮಾಡತಕ್ಕದ್ದು.

22) ಆಸಕ್ತ ಅರ್ಜಿದಾರರು ಮೇಲಿನ ಎಲ್ಲಾ ನಿಬಂಧನೆಗಳಿಗೆ ಒಳಪಟ್ಟು, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಧೀಶರು ಬೀದರ ಇವರಿಗೆ ಟೆಂಡರ್ ಪ್ರಸಾವನೆಯನ್ನು ಅನುಬಂಧ–1 ರಲ್ಲಿ ಮೋಹರಾದ ಲಕೋಟೆಯಲ್ಲಿ ದಿನಾಂಕ 26/03/2025 ರ ಸಂಜೆ 5:00 ಗಂಟೆಯ ಒಳಗಾಗಿ ಸಲ್ಲಿಸತಕ್ಕದು ಲಕೋಟೆಯ ಮೇಲೆ "Tender for Running Hotel/Canteen at District Court Complex, Bidar" ಎಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು.

23) ಕೊನೆಯ ದಿನಾಂಕದಂದು ಸ್ವೀಕರಿಸದ ಎಲ್ಲಾ ಮೊಹರಾದ ಟಂಡರಗಳನ್ನು ದಿನಾಂಕ 26–03-2025 ರ ಸಂಜೆ 5:30 ಕ್ಕೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೀದರ ಹಾಗೂ ಹಾಜರಿರುವ ಟೆಂಡರ್‌ದಾರರ ಸಮಕ್ಷಮದಲ್ಲಿ ತೆರೆಯಲಾಗುವುದು ಮತ್ತು ಅತಿಹೆಚ್ಚಿನ ಬಾಡಿಗೆಯ ಪ್ರಸ್ತಾವನೆ ಮಾಡಿರುವ ಟೆಂಡರ್‌ನ್ನು ಸ್ವೀಕರಿಸುವ ಅಧಿಕಾರ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೀದರ ರವರು ಹೊಂದಿರುತ್ತಾರೆ.

24) ಈ ಕೆಳಗೆ ಸಹಿ ಮಾಡಿರುವರು ಯಾವುದೇ ಕಾರಣವನ್ನು ನೀಡದೆ ಟೆಂಡರ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಾಗೂ ಟೆಂಡರ್ ಪ್ರಕ್ರಿಯಯನ್ನು ರದ್ದು ಪಡಿಸುವ ಅಧಿಕಾರವನ್ನು ಹೊಂದಿರುತ್ತಾರೆ.

25) ಸದರಿ ಹೋಟೆಲ್ (ಕ್ಯಾಂಟಿನ್) ಸ್ಥಳ 3500 ಚದರ ಅಡಿ ಇದ್ದು, ಇದನ್ನು ತಮ್ಮ ಸ್ವಂತ ವೆಚ್ಚದಲ್ಲಿ ಸ್ಥಾಪನೆ/ಸುಧಾರಣೆ/ನವೀಕರಣ ಮಾಡಿ ಇದಕ್ಕೆ ತಗಲುವ ಒಟ್ಟು ವೆಚ್ಚವನ್ನು ತಮ್ಮ ಸ್ವಂತ ಬಂಡವಾಳದಿಂದ ಇಲಾಖೆ ಶಾಖಾಧಿಕಾರಿಗಳ ಮಾರ್ಗದರ್ಶನದಂತೆ ಕೆಲಸವನ್ನು ನಿರ್ವಹಿಸುವುದು.

**ಟೆಂಡರ್ ಸಲ್ಲಿಸಲು ಕೋನೆಯ ದಿನಾಂಕ: 26/03/2025 ರಂದು ಸಂಜೆ 05:00 ಗಂಟೆಯವರೆಗೆ ಅದೇ ದಿನ ಸಂಜೆ 05:30 ಕ್ಕೆ ಟೆಂಡರ್‌ಗಳನ್ನು ತೆರೆಯಾಲಾಗುವುದು.**

ಆ ಟೆಂಡರ್ ಪ್ರಕ್ರಿಯೆಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕೆಲಸದ ವೇಳೆಯಲ್ಲಿ ಮುಖ್ಯ ಆಡಳಿತಾಧಿಕಾರಿಗಳು, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೀದರ ರವರನ್ನು ಸಂಪರ್ಕಿಸಿ ಪಡೆಯಬಹುದು.

ದಿನಾಂಕ: 03/03/2025
ಸ್ಥಳ: ಬೀದರ.

ಸಹಿ/-
(ವಿ. ಎಮ್. ಆನಂದಶೆಟ್ಟಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೀದರ್

**ಪ್ರತಿಯನ್ನು ಪ್ರಚಾರಕ್ಕಾಗಿ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸುವ ಕೋರಿಕೆಯೊಂದಿಗೆ ಕಳುಹಿಸಲಾಗಿದೆ.**

1. ಬೀದರ ಜಿಲ್ಲೆಯ ಎಲ್ಲಾ ನ್ಯಾಯಾಧೀಶರುಗಳಿಗೆ
2. ಜಿಲ್ಲಾಧಿಕಾರಿಗಳು, ಬೀದರ
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಕಚೇರಿ, ಬೀದರ.
4. ತಹಶೀಲ್ದಾರರು, ಬೀದರ
5. ಕಾರ್ಯನಿರ್ವಾಹಕ ಇಂಜಿನಿಯರರು ಲೊಕೋಪಯೋಗಿ ಇಲಾಖೆ ವಿಭಾಗ ಬೀದರ್
6. ಸಹಾಯಕ ಕಾರ್ಯನಿರ್ವಾಹಕ ಅಭೀಯಂತರು, ಲೋಕೋಪಯೋಗಿ ಇಲಾಖೆ, ಬೀದರ್
7. ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೀದರ ಉಚಿತ ಪ್ರಕಟಣೆಗಾಗಿ
8. ಈ ಕಚೇರಿಯ ಅಕೌಂಟ್ ಶೆರಿಸ್ತೆದಾರರಿಗೆ
9. ಸಾಫ್ಟ್‌ವೇರ್ ಟಿಕ್ನಶಿಯನ್, ಜಿಲ್ಲಾ ನ್ಯಾಯಾಲಯ (ಜಿಲ್ಲಾ ನ್ಯಾಯಾಲಯದ ವೆಬ್ ಸೈಟ್ ನಲ್ಲಿ ಪ್ರಕಟಣೆಗಾಗಿ)
10. ಅಧ್ಯಕ್ಷರು, ವಕೀಲರು ಸಂಘ, ಬೀದರ್
11. ಕಛೇರಿ ಸೂಚನಾ ಫಲಕಕ್ಕೆ.

# ಅನುಬಂಧ–1

ಇವರಿಗೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೀದರ್.

ಮಾನ್ಯರೇ,

**ವಿಷಯಃ** ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣ, ಬೀದರ್‌ನಲ್ಲಿ ಹೋಟೆಲ್(ಕ್ಯಾಂಟೀನ್) ನಡೆಸಲು ಟೆಂಡರ ಸಲ್ಲಿಸುವ ಬಗ್ಗೆ.

**ಉಲ್ಲೇಖಃ** ಈ ಕಚೇರಿಯ ಟೆಂಡರ ಅಧಿಸೂಚನೆ ಸಂಖ್ಯೆ, 104/2025 ದಿನಾಂಕ 03/03/2025

* * * * *

ಈ ಕೆಳಗೆ ಸಹಿ ಮಾಡಿರುವ ಶ್ರೀಮತಿ/ಶ್ರೀ________________________________ ಆದ ನಾನು/ನಾವು ಉಲ್ಲೇಖಿತ ಟೆಂಡರ ಪ್ರಕಟಣೆಯ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟು ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣ, ಬೀದರ್‌ನಲ್ಲಿ ಹೋಟೆಲ್(ಕ್ಯಾಂಟೀನ್) ನಡೆಸಲು ಆಸಕ್ತರಿದ್ದು, ಈ ಮೂಲಕ ಈ ಕೆಳಗಿನ ವಿವರಗಳೊಂದಿಗೆ ಟೆಂಡರ್ ಸಲ್ಲಿಸುತ್ತದ್ದೇನೆ/ವೆ ಮತ್ತು ಹೋಟೆಲ್(ಕ್ಯಾಂಟೀನ್) ನಡೆಸುವ ಬಗ್ಗೆ ಕರಾರನ್ನು ಮಾಡಿಕೊಳ್ಳಲು ಒಪ್ಪಿರುತ್ತೇನೆ/ವೆ.

1. ಟೆಂಡರುದಾರರ ಹೆಸರು :
2. ಪೂರ್ಣ ವಿಳಾಸ :

   ಅ) ಮೊಬೈಲ್ ಸಂಖ್ಯೆ :

   ಆ) ಇ–ಮೇಲ್ ವಿಳಾಸ :
3. EMD ಮೊಬಲಗಿನ ಬಗ್ಗೆ ಡಿಮ್ಯಾಂಡ್ ಡ್ರಾಫ್ಟ್‌ನ ಮೊತ್ತ, ಸಂಖ್ಯೆ ಹಾಗೂ ದಿನಾಂಕ :
4. ಈ ಹಿಂದೆ ಸದರಿ ಹೋಟೆಲ್(ಕ್ಯಾಂಟಿನ್) ನಡೆಸಿದ್ದೀರಾ :
5. ಪ್ರತಿ ತಿಂಗಳ ಬಾಡಿಗೆ ದರ :

6. ಉದ್ಯಮ ಪರವಾನಿಗೆ ವಿವರಗಳನ್ನು :
(ಪ್ರತಿಗಳನ್ನು ಲಗತ್ತಿಸುವುದು)
ಅ) ನೋಂದಣಿ ಸಂಖ್ಯೆ

ಆ) ಪ್ಯಾನ್ ನಂ. :

ಇ) ಪಿಎಫ್ ರಿಜಿಸ್ಟ್ರೇಷನ್ ನಂ :

ಈ) ಇಎಸ್ಐ ರಿಜಿಸ್ಟ್ರೇಷನ್ ನಂ :

ಉ) ಜಿಎಸ್‌ಟಿ ರಿಜಿಸ್ಟ್ರೇಷನ್ ನಂ :

ಊ) ಟಿನ್ ನಂ :

ಸ್ಥಳಃ
ದಿನಾಂಕಃ

ಟೆಂಡರುದಾರರ ಹೆಸರು ಹಾಗೂ ಸಹಿ
ಮೊಹರಿನೊಂದಿಗೆ

# <u>ಅನುಬಂಧ–2</u>

ಆಹಾರ ಪದಾರ್ಥಗಳ ಪ್ರಸ್ತಾವಿತ ದರಪಟ್ಟಿ(ಮಾದರಿ)

| ಕ್ರ. ಸಂ. | ತಿಂಡಿ/ಪಾನೀಯಗಳ ಹೆಸರು | ಪ್ರಮಾಣ | ದರ |
|---|---|---|---|
| 1 | | | |

ಸ್ಥಳಃ
ದಿನಾಂಕಃ

ಟೆಂಡರುದಾರರ ಹೆಸರು ಹಾಗೂ ಸಹಿ
ಮೊಹರಿನೊಂದಿಗೆ